ಸ್ಥಾಪನೆ : 1976

# ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ನೋಂದಾಯಿತ ಮತ್ತು ಆಡಳಿತ ಕಛೇರಿ :**

ನಂ. 195/33, ಶ್ರೀ ಸುಧಾ ರಜತ ಭವನ, ಆರ್.ವಿ. ರಸ್ತೆ, ಜಯನಗರ, ಬೆಂಗಳೂರು-560 011.

ದೂರವಾಣಿ : 26565651, 26560195, 8867701055 ಫ್ಯಾಕ್ಸ್ : 26567189

Email : generalmanager@srisudhabank.com Website : www.srisudhabank.com

## 45ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ತಿಳುವಳಿಕೆ

ಮಾನ್ಯ ಸದಸ್ಯರೇ,

ಬ್ಯಾಂಕಿನ **45ನೇ ವಾರ್ಷಿಕ** ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 18-09-2022ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ **ಬ್ಯಾಂಕಿನ ಅಧ್ಯಕ್ಷರಾದ ಡಾ||ಎಂ.ತಿಮ್ಮೇಗೌಡರವರ** ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯೊಂದಿಗೆ ದಯಾನಂದಸಾಗರ ಮೆಮೋರಿಯಲ್ ಹಾಲ್, ನಂ. 264/266, ಟಿ. ಮರಿಯಪ್ಪ ರಸ್ತೆ, 2ನೇ ಬ್ಲಾಕ್, ಜಯನಗರ (ಅಶೋಕ ಪಿಲ್ಲರ್ ಹತ್ತಿರ), ಬೆಂಗಳೂರು-560 011. ರಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ತಪ್ಪದೆ ಭಾಗವಹಿಸಲು ಕೋರಿದೆ.

### ಸಭೆಯ ಕಾರ್ಯಕ್ರಮಗಳು :

1. ಪ್ರಾರ್ಥನೆ.
2. ಸ್ವಾಗತ – ಬ್ಯಾಂಕಿನ ಅಧ್ಯಕ್ಷರಿಂದ.
3. 45ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರವನ್ನು ಓದಿ ದಾಖಲು ಮಾಡುವುದು.
4. ದೈವಾಧೀನರಾದ ಸದಸ್ಯರುಗಳ ಗೌರವಾರ್ಥವಾಗಿ ಸಂತಾಪ ಸೂಚನೆ.
5. ದಿನಾಂಕ 19.12.2021 ರಂದು ನಡೆದ ಬ್ಯಾಂಕಿನ 44ನೇ ವಾರ್ಷಿಕ ಸರ್ವ ಸದಸ್ಯರ ವರ್ಚುವಲ್ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.
6. ಬ್ಯಾಂಕಿನ 2021-2022ನೇ ವರ್ಷದ ಆಡಳಿತ ಮಂಡಳಿಯ ವರದಿ ಮತ್ತು 2022-23ನೇ ವರ್ಷದ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಅನುಮೋದಿಸುವುದು.
7. ಬ್ಯಾಂಕಿನ 2021-2022ನೇ ವರ್ಷದ ಆಡಿಟ್ಟಾದ ಲೆಕ್ಕಗಳು ಮತ್ತು ವರದಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು.
8. 2021-2022ನೇ ವರ್ಷದಲ್ಲಿ ಬ್ಯಾಂಕು ಗಳಿಸಿದ ನಿವ್ವಳ ಲಾಭದ ಹಂಚಿಕೆ.
9. 2021-2022ನೇ ವರ್ಷದಲ್ಲಿ ಮಂಜೂರಾದ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಖರ್ಚಾಗಿರುವುದನ್ನು ಅನುಮೋದಿಸುವುದು ಮತ್ತು 2022-2023ನೇ ವರ್ಷಕ್ಕೆ ಅಂದಾಜು ಆದಾಯ ಮತ್ತು ವೆಚ್ಚವನ್ನು ಅನುಮೋದಿಸುವುದು.
10. 2022-23ನೇ ಸಾಲಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮೋದನೆಯಾದ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಸ್ಥಿರೀಕರಿಸುವುದು.
11. ಬ್ಯಾಂಕಿನ ಉಪವಿಧಿಗೆ ಹೊಸ ಸೇರ್ಪಡೆ ಸಂಖ್ಯೆ 21(1)(ಐ) ಮತ್ತು 64(4)(1) ಹಾಗೂ ಉಪವಿಧಿ ಸಂಖ್ಯೆ 64(3) ಮತ್ತು 64(4) ಕ್ಕೆ ತಿದ್ದುಪಡಿಯನ್ನು ಪರಿಶೀಲಿಸಿ ಅನುಮೋದಿಸುವುದು.
12. ಸದಸ್ಯರ ಮಕ್ಕಳಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಗರಿಷ್ಟ ಅಂಕ ಪಡೆದ ತಲಾ 25 ಮಕ್ಕಳಿಗೆ ಪ್ರತಿಭಾ ಪುರಸ್ಕಾರ.
13. ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ.
14. ಅಧ್ಯಕ್ಷರ ಅನುಮತಿಯೊಂದಿಗೆ ಇತರೆ ವಿಷಯಗಳು.

ಬೆಂಗಳೂರು

ದಿನಾಂಕ : 16-07-2022

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ

**ಕೋಕಿಲ ಎಸ್.ಎಸ್.**

ಪ್ರಧಾನ ವ್ಯವಸ್ಥಾಪಕರು

ವಿಶೇಷ ಸೂಚನೆ :-
1) ಬ್ಯಾಂಕಿನ ಗುರುತಿನ ಚೀಟಿ ಇಲ್ಲದೆ ಸಭೆಗೆ ಪ್ರವೇಶವಿಲ್ಲ ಹಾಗೂ 11.30 ಗಂಟೆ ನಂತರ ಹಾಜರಾತಿಗೆ ಅವಕಾಶವಿಲ್ಲ.
2) ಸದಸ್ಯೇತರರ ಪ್ರವೇಶಕ್ಕೆ ಅವಕಾಶವಿಲ್ಲ.
3) ಸದಸ್ಯರಿಗಾಗಿ ಬೆಳಿಗ್ಗೆ 11.30 ಗಂಟೆಯವರೆಗೆ ಲಘು ಉಪಹಾರದ ವ್ಯವಸ್ಥೆ ಏರ್ಪಡಿಸಲಾಗಿದೆ.

# 45ನೇ ಸರ್ವ ಸದಸ್ಯರ ಸಭೆಯ ಕಾರ್ಯಸೂಚಿಗೆ ಟಿಪ್ಪಣಿ

| ಕಾರ್ಯಸೂಚಿಯಲ್ಲಿರುವ ಕ್ರ.ಸಂ. | ಟಿಪ್ಪಣಿ |
|---|---|
| 3. | 45 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯು ಈಗಾಗಲೇ ತಮ್ಮ ಕೈ ಸೇರಿದೆ. |
| 4. | ದೈವಾಧೀನರಾದ ಸದಸ್ಯರುಗಳ ಹೆಸರನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಪ್ರಕಟಿಸಲಾಗಿದೆ. |
| 5. | 19-12-2021ರಂದು ನಡೆದ 44ನೇ ವಾರ್ಷಿಕ ಸರ್ವ ಸದಸ್ಯರ ವರ್ಚುವಲ್ ಸಭೆಯ ನಡವಳಿಕೆಗಳನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 6. | 2021-22ನೇ ಸಾಲಿನ ಆಡಳಿತ ಮಂಡಳಿ ವರದಿ ಹಾಗೂ 2022-23ನೇ ಸಾಲಿನ ಕ್ರಿಯಾ ಯೋಜನೆಯನ್ನು ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 7. | 2021-2022ನೇ ಸಾಲಿನ ಪರಿಶೋಧಿತ ಲೆಕ್ಕ ಪರಿಶೋಧನಾ ವರದಿಗೆ ಸಮಜಾಯಿಷಿಯನ್ನು ವಾರ್ಷಿಕ ವರದಿಯ ಪುಸ್ತಕದಲ್ಲಿ ಮುದ್ರಿಸಲಾಗಿದೆ ಹಾಗೂ ಬ್ಯಾಂಕ್ ವೆಬ್ ಸೈಟ್ **www.srisudhabank.com** ರಲ್ಲಿ ಪ್ರಕಟಿಸಲಾಗಿದೆ. |
| 8. | 2021-2022ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ. |
| 9. | 2021-2022ನೇ ಸಾಲಿಗೆ ಮಂಜೂರಾದ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಖರ್ಚಾಗಿರುವುದನ್ನು ಕಾರಣ ಸಹಿತವಾಗಿ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಹಾಗೂ 2022-2023ನೇ ಸಾಲಿಗೆ ಬಜ್ಜೆಟ್ ಸಹ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಿದೆ. |
| 10. | ಮೆ॥ ಸುಂದರೇಶ್ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯನ್ನು 2022-23ನೇ ಸಾಲಿಗೆ, RBI ಅನುಮೋದಿಸಿದ್ದು ಸರ್ವಸದಸ್ಯರ ಸಭೆಯ ಸ್ಥಿರೀಕರಣಕ್ಕಿಡಲಾಗಿದೆ. |
| 11. | ಬ್ಯಾಂಕಿನ ಉಪವಿಧಿಗೆ ಹೊಸ ಸೇರ್ಪಡೆ ಸಂಖ್ಯೆ 21(1)(ಐ)ಮತ್ತು64(4)(1)ಹಾಗೂ ಉಪವಿಧಿ ಸಂಖ್ಯೆ 64(3) ಮತ್ತು 64(4) ಕ್ಕೆ ತಿದ್ದುಪಡಿಯನ್ನು ಪರಿಶೀಲಿಸಿ ಅನುಮೋದನೆಗಾಗಿ ವಾರ್ಷಿಕ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. |
| 12. | ಪ್ರತಿ ಸಾಲಿನಂತೆ ಈ ಸಾಲಿನಲ್ಲಿಯೂ, ಬ್ಯಾಂಕಿನಲ್ಲಿ ಸ್ವೀಕೃತವಾದ ಅರ್ಜಿಗಳಲ್ಲಿ ಗರಿಷ್ಠ ಅಂಕವನ್ನಾಧರಿಸಿ ಎಸ್.ಎಸ್.ಎಲ್.ಸಿ ಯ 25 ವಿದ್ಯಾರ್ಥಿಗಳಿಗೆ ತಲಾ ರೂ.7,500/- ರಂತೆ ಹಾಗೂ ಪಿ.ಯು.ಸಿ ಯ 25 ವಿದ್ಯಾರ್ಥಿಗಳಿಗೆ ತಲಾ ರೂ.10,000/- ರಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |
| 13. | ಸದಸ್ಯರಿಂದ ನಿಗದಿತ ಸಮಯದೊಳಗೆ ಸಲಹೆ/ಸೂಚನೆಗಳೇನಾದರೂ ಬಂದಿದ್ದಲ್ಲಿ ವಿಮರ್ಶೆ. |

## ವಿಶೇಷ ಸೂಚನೆ

1. ಎಲ್ಲಾ ಸದಸ್ಯರು ತಮ್ಮ ಷೇರು ಖಾತೆಗೆ ಸಂಬಂಧಿಸಿದಂತೆ ಇತ್ತೀಚಿನ **KYC** ದಾಖಲೆಗಳನ್ನು ಸಲ್ಲಿಸಿ ಷೇರು ಖಾತೆಗಳನ್ನು update ಮಾಡಿಕೊಳ್ಳತಕ್ಕದ್ದು.

2. ವಾರ್ಷಿಕ ವರದಿಯ ಪುಸ್ತಕವನ್ನು ದಿನಾಂಕ: 06/09/2022 ರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಕೇಂದ್ರ ಕಛೇರಿ ಹಾಗೂ ಶಾಖೆಗಳಲ್ಲಿ ಸದಸ್ಯರು ಖುದ್ದಾಗಿ ಪಡೆಯಬಹುದು. ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಅಥವಾ ಸಲಹೆ ಸೂಚನೆಗಳೇನಾದರೂ ಇದ್ದಲ್ಲಿ ದಿನಾಂಕ 12/09/2022ರೊಳಗೆ ಲಿಖಿತವಾಗಿ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 17(1)(ಡಿ) ಕ್ಕೆ ಸಂಬಂಧಿಸಿದಂತೆ ದಿನಾಂಕ 07.10.2021 ರಿಂದ ಜಾರಿಗೆ ಬಂದ ತಿದ್ದುಪಡಿ ಅನ್ವಯ, ಒಂದಕ್ಕಿಂತ ಹೆಚ್ಚು ಸಹಕಾರ ಬ್ಯಾಂಕ್‌ಗಳಲ್ಲಿ ಸದಸ್ಯತ್ವ ಹೊಂದಿದವರೇನಾದರೂ ಇದ್ದಲ್ಲಿ ಅಂತಹವರು 90ದಿನಗಳೊಳಗಾಗಿ ಒಂದು ಬ್ಯಾಂಕಿನಲ್ಲಿ ಮಾತ್ರ ಸದಸ್ಯತ್ವವನ್ನು ಉಳಿಸಿಕೊಂಡು ಉಳಿದೆಲ್ಲ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳದಿದ್ದಲ್ಲಿ ಅಂತಹವರು ಹೊಸದಾಗಿ ಯಾವ ಸಹಕಾರ ಬ್ಯಾಂಕಿನಲ್ಲಿ ಸದಸ್ಯತ್ವವನ್ನು ಪಡೆದಿರುವರೋ ಅವರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು.

4. ಬ್ಯಾಂಕಿನ ಎ.ಟಿ.ಎಂ ಯಂತ್ರವನ್ನು ಜಯನಗರದಲ್ಲಿ ಸ್ಥಾಪಿಸಲಾಗಿದೆ ನಮ್ಮ ಹಾಗೂ ಯಾವುದೇ ಬ್ಯಾಂಕ್‌ನ ಎ.ಟಿ.ಎಂ ಕಾರ್ಡ್ ಮುಖಾಂತರ ಹಣ ಡ್ರಾ ಮಾಡಬಹುದು.

5. ಸದಸ್ಯರೆಲ್ಲರೂ ನಮ್ಮ ಬ್ಯಾಂಕಿನ "ಡೆಬಿಟ್ ಕಾರ್ಡ್" ಪಡೆದು, ವ್ಯವಹರಿಸಲು ಕೋರಲಾಗಿದೆ. ನಮ್ಮ ಬ್ಯಾಂಕ್ ಅಥವಾ ಹೆಚ್.ಡಿ.ಎಫ್.ಸಿ ಬ್ಯಾಂಕ್ ಎ.ಟಿ.ಎಂ. ಬಳಸಿದಲ್ಲಿ, ವ್ಯವಹಾರ ಶುಲ್ಕ ರಿಯಾಯಿತಿ ಇದೆ.

6. ಪ್ರತಿಯೊಬ್ಬ ಸದಸ್ಯರು ಖಾತೆದಾರರು ತಮ್ಮ ಷೇರು / ಠೇವಣಿ , ಉಳಿತಾಯ / ಚಾಲ್ತಿ ಖಾತೆಗಳಿಗೆ ತಮ್ಮ ವಾರಸುದಾರರನ್ನು ನೇಮಿಸಿರತಕ್ಕದ್ದು.

7. ಮೃತ ದಿನಾಂಕದಿಂದ ಷೇರು ಬಂಡವಾಳಕ್ಕೆ ಡಿವಿಡೆಂಡ್ ನೀಡಲು ಅವಕಾಶವಿಲ್ಲದಿರುವುದರಿಂದ ಹಾಗೇನಾದರೂ ಪಾವತಿಯಾದಲ್ಲಿ ಮರಣೋತ್ತರ ಪರಿಹಾರ ನಿಧಿಯಲ್ಲಿ ಕಟಾಯಿಸಲಾಗುವುದು.

## ಮಹತ್ವ ಪೂರ್ಣ ಸೂಚನೆ :

1) ತಿದ್ದುಪಡಿಯಾದ ಸಹಕಾರ ಕಾಯ್ದೆಯನ್ವಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಹಾಜರಾಗಬೇಕಾಗಿರುವುದು ಅಗತ್ಯವಾಗಿರುವುದರಿಂದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

2) 2018-2019ನೇ ವರ್ಷಕ್ಕೆ ಸದಸ್ಯರಿಗೆ ಮಂಜೂರಾದ ಷೇರು ಡಿವಿಡೆಂಡ್‌ನ್ನು ದಿನಾಂಕ 31-12-2022 ರೊಳಗಾಗಿ ಪಡೆಯಬೇಕು ತಪ್ಪಿದಲ್ಲಿ ಆಪದ್ಧನಕ್ಕೆ ವರ್ಗಾಯಿಸಲಾಗುವುದು. ಇದೇ ಆಖೈರು ನೋಟೀಸೆಂದು ಭಾವಿಸತಕ್ಕದ್ದು.

3) ಸುಸ್ತಿದಾರನಾದ ಸದಸ್ಯರು ಬಾಕಿ ಸಂದಾಯ ಮಾಡುವವರೆಗೂ ಹಕ್ಕುಗಳನ್ನು ಚಲಾಯಿಸತಕ್ಕದ್ದಲ್ಲ.

4) ಉಪವಿಧಿ 19(3) ರಂತೆ ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ 5 ರಲ್ಲಿ ಎರಡು ಸಹಕಾರ ವರ್ಷಗಳಲ್ಲಿ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಯನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯರು ಒಂದು ವರ್ಷ ಅವಧಿಗೆ ಸಾಮಾನ್ಯ ಸಭೆಯಲ್ಲಿ ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

**ಕನಿಷ್ಠ ಸೇವೆಗಳು :** (ಎಲ್ಲಾ ಅಥವಾ ಯಾವುದೇ ಒಂದು ಸೇವೆ)

(1) ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳ ರೂ.1000/-ಗಳು.

(2) ಸದಸ್ಯರು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು.

(3) ಸದಸ್ಯರು ತನ್ನ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆಗಳಲ್ಲಿ ವರ್ಷದಲ್ಲಿ ಕನಿಷ್ಠ ಮೂರು ವ್ಯವಹಾರಗಳನ್ನು ಮಾಡಿರತಕ್ಕದ್ದು.

## ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ

2022ನೇ ಏಪ್ರಿಲ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮರಲ್ಲಿ ಪ್ರಥಮರಾಗಿ ಉತ್ತೀರ್ಣರಾದ ಸದಸ್ಯರ 25 ಮಕ್ಕಳಿಗೆ ತಲಾ ರೂ.7,500-00 ಗಳ ಹಾಗೂ ಪಿಯುಸಿ ಎರಡನೇ ವರ್ಷದಲ್ಲಿ ಉತ್ತೀರ್ಣರಾದ ಸದಸ್ಯರ 25 ಮಕ್ಕಳಿಗೆ ತಲಾ ರೂ.10,000-00 ಪ್ರೋತ್ಸಾಹ ಧನವನ್ನು ನೀಡಲು ಉದ್ದೇಶಿಸಿದೆ.

ಮೇಲ್ಕಂಡ ಪ್ರೋತ್ಸಾಹಧನದ ಪ್ರಯೋಜನ ಪಡೆಯಲು ಮಕ್ಕಳ ತಂದೆ ತಾಯಿಯವರು ಸದಸ್ಯತ್ವದ ಗುರುತಿನ ಚೀಟಿ, ಮಕ್ಕಳ ಅಂಕಪಟ್ಟಿ, ಮುಂದಿನ ತರಗತಿಗೆ ದಾಖಲಾದ ಪ್ರಮಾಣ ಪತ್ರ ಮತ್ತು ಭಾವ ಚಿತ್ರಗಳೊಂದಿಗೆ ದಿನಾಂಕ: 14/09/2022ರಂದು ಸಂಜೆ 5-30ರೊಳಗಾಗಿ ಆಡಳಿತ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಿದೆ.

# ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆರ್.ವಿ. ರಸ್ತೆ, ಜಯನಗರ, ಬೆಂಗಳೂರು-560 011.

## ಬ್ಯಾಂಕಿನ ಉಪವಿಧಿಗಳ ತಿದ್ದುಪಡಿ

| ಹಾಲಿ ಉಪವಿಧಿ ಸಂಖ್ಯೆ | ಹಾಲಿ ಜಾರಿಯಲ್ಲಿರುವ ಉಪವಿಧಿ | ತಿದ್ದುಪಡಿ / ಸೇರ್ಪಡೆಯಾಗಬೇಕಾಗಿರುವುದು | ತಿದ್ದುಪಡಿ / ಸೇರ್ಪಡೆಯಾದ ಮೇಲೆ ಇರುವುದು | ತಿದ್ದುಪಡಿ / ಸೇರ್ಪಡೆಗೆ ಕಾರಣ |
|---|---|---|---|---|
| 21 | **ಸದಸ್ಯತ್ವ ಅಂತ್ಯವಾಗುವಿಕೆ :**<br>ಹೊಸ ಸೇರ್ಪಡೆ<br>21(1)(ಐ) | **ಸದಸ್ಯತ್ವ ಅಂತ್ಯವಾಗುವಿಕೆ :**<br>21(1)(ಐ)<br>ಯಾವುದೆ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸಹಕಾರ ಬ್ಯಾಂಕ್‌ಗಳಲ್ಲಿ ಸದಸ್ಯತ್ವ ಹೊಂದಿದ್ದಲ್ಲಿ ಅಂತಹ ವ್ಯಕ್ತಿಯು 90 ದಿನಗಳೊಳಗಾಗಿ ಒಂದು ಬ್ಯಾಂಕಿನಲ್ಲಿ ಮಾತ್ರ ಸದಸ್ಯತ್ವವನ್ನು ಉಳಿಸಿಕೊಂಡು ಉಳಿದೆಲ್ಲ ಬ್ಯಾಂಕ್‌ಗಳ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಮೊತ್ತಮೊದಲು ಪಡೆದ ಸದಸ್ಯತ್ವದ ಬ್ಯಾಂಕನ್ನು ಹೊರತುಪಡಿಸಿ, ಉಳಿದೆಲ್ಲಾ ಬ್ಯಾಂಕಿನ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು. | **ಸದಸ್ಯತ್ವ ಅಂತ್ಯವಾಗುವಿಕೆ :**<br>21(1)(ಐ)<br>0ಯಾವುದೆ ಒಬ್ಬ ವ್ಯಕ್ತಿ0ಯು ಒಂದಕ್ಕಿಂತ ಹೆಚ್ಚು ಸಹಕಾರ ಬ್ಯಾಂಕ್‌ಗಳಲ್ಲಿ ಸದಸ್ಯತ್ವ ಹೊಂದಿದ್ದಲ್ಲಿ ಅಂತಹ ವ್ಯಕ್ತಿ0ಯು 90 ದಿನಗಳೊಳಗಾಗಿ ಒಂದು ಬ್ಯಾಂಕಿನಲ್ಲಿ ಮಾತ್ರ ಸದಸ್ಯತ್ವವನ್ನು ಉಳಿಸಿಕೊಂಡು ಉಳಿದೆಲ್ಲ ಬ್ಯಾಂಕ್‌ಗಳ ಸದಸ್ಯತ್ವವನ್ನು ರದ್ದುಪಡಿಸಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಮೊತ್ತಮೊದಲು ಪಡೆದ ಸದಸ್ಯತ್ವದ ಬ್ಯಾಂಕನ್ನು ಹೊರತುಪಡಿಸಿ, ಉಳಿದೆಲ್ಲಾ ಬ್ಯಾಂಕಿನ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು. | ಸಹಕಾರ ಕಾಯ್ದೆಗೆ ದಿನಾಂಕ 07.10.2021ರ ತಿದ್ದುಪಡಿಯಂತೆ |
| 64 (3) | **64(3) ಅನುಕಂಪದ ಆಧಾರದ ಮೇಲೆ ನೇಮಕಾತಿ :**<br>ಎರಡನೇ ಖಂಡದಲ್ಲಿ ಏನೇ ಇದ್ದರೂ, ಮೃತ ಪುರುಷ ನೌಕರನ ವಿಧವೆಯಾಗಿದ್ದಲ್ಲಿ ಅಥವಾ ಮಹಿಳಾ ನೌಕರಳ ವಿಧುರನಾಗಿದ್ದಲ್ಲಿ, ಅಥವಾ ವೈದ್ಯಕೀಯ ಅಸಮರ್ಥತಾ ನಿವೃತ್ತ ವ್ಯಕ್ತಿಯ ಕುಟುಂಬ ಸದಸ್ಯರ ನೇಮಕಾತಿಗೆ ಈ ವಯೋಮಿತಿಯು ಅನ್ವಯಿಸತಕ್ಕದ್ದಲ್ಲ ಎಂದು ಭಾವಿಸತಕ್ಕದ್ದು. | **64(3) ಅನುಕಂಪದ ಆಧಾರದ ಮೇಲೆ ನೇಮಕಾತಿ :**<br>ಎರಡನೇ ಖಂಡದಲ್ಲಿ ಏನೇ ಇದ್ದರೂ, ಮೃತ / ವೈದ್ಯಕೀಯ ಅಸಮರ್ಥತಾ ಸಿಬ್ಬಂದಿಗಳು 50 ವರ್ಷಗಳೊಳಗಿನ ವಯಸ್ಸಿನವರಾಗಿದ್ದಲ್ಲಿ ಮಾತ್ರ ಅಂತಹ ಮೃತ ಪುರುಷ ನೌಕರನ ವಿಧವೆಯಾಗಿದ್ದಲ್ಲಿ ಅಥವಾ ಮಹಿಳಾ ನೌಕರಳ ವಿಧುರನಾಗಿದ್ದಲ್ಲಿ, ಅಥವಾ ವೈದ್ಯಕೀಯ ಅಸಮರ್ಥತಾ ನಿವೃತ್ತ ವ್ಯಕ್ತಿಯ ಕುಟುಂಬ ಸದಸ್ಯರ ನೇಮಕಾತಿಗೆ ಈ ವಯೋಮಿತಿಯು ಅನ್ವಯಿಸತಕ್ಕದ್ದಲ್ಲ ಎಂದು ಭಾವಿಸತಕ್ಕದ್ದು. | **64(3) ಅನುಕಂಪದ ಆಧಾರದ ಮೇಲೆ ನೇಮಕಾತಿ :**<br>ಎರಡನೇ ಖಂಡದಲ್ಲಿ ಏನೇ ಇದ್ದರೂ, ಮೃತ / ವೈದ್ಯಕೀಯ ಅಸಮರ್ಥತಾ ಸಿಬ್ಬಂದಿಗಳು 50 ವರ್ಷಗಳೊಳಗಿನ ವಯಸ್ಸಿನವರಾಗಿದ್ದಲ್ಲಿ ಮಾತ್ರ ಅಂತಹ ಮೃತ ಪುರುಷ ನೌಕರನ ವಿಧವೆಯಾಗಿದ್ದಲ್ಲಿ ಅಥವಾ ಮಹಿಳಾ ನೌಕರಳ ವಿಧುರನಾಗಿದ್ದಲ್ಲಿ, ಅಥವಾ ವೈದ್ಯಕೀಯ ಅಸಮರ್ಥತಾ ನಿವೃತ್ತ ವ್ಯಕ್ತಿಯ ಕುಟುಂಬ ಸದಸ್ಯರ ನೇಮಕಾತಿಗೆ ಈ ವಯೋಮಿತಿಯು ಅನ್ವಯಿಸತಕ್ಕದ್ದಲ್ಲ ಎಂದು ಭಾವಿಸತಕ್ಕದ್ದು. | ಸಿಬ್ಬಂದಿಗಳಿಗೆ ಸಾಕಷ್ಟು ಆರ್ಥಿಕ ಭದ್ರತೆಯೊಂದಿಗೆ ಹೆಚ್ಚುವರಿಯಾಗಿ ಸಾಮೂಹಿಕ ಜೀವ ವಿಮಾ ಭದ್ರತೆ0ಯನ್ನು ವಿವಿಧ ಹಂತಗಳಲ್ಲಿ ಒದಗಿಸಿದ್ದು, ಮರಣೋತ್ತರ ಆರ್ಥಿಕ ಸೌಲಭ್ಯ ಸಾಕಷ್ಟಿರುತ್ತದೆ. ಅಂತೆಯೇ ವೈದ್ಯಕೀಯವಾಗಿ ನಿವೃತ್ತಿಯಾದಲ್ಲಿ ಸಹಾ ಸಿಗುವ ಆರ್ಥಿಕ ಸೌಲಭ್ಯ ಜೀವನಾಧಾರಕ್ಕೆ ಸಾಕಷ್ಟಿರುತ್ತದೆ. ಅಲ್ಲದೇ, ಅನುಕಂಪದ ಆಧಾರದ ನೇಮಕಾತಿಯು ಕಾರ್ಯಕ್ಷಮತೆಯ ನಿಗದಿತ ಮಟ್ಟದಲ್ಲಿರುವುದಿಲ್ಲ. |

| ಉಪ ವಿಧಿಗಳ ಸಂಖ್ಯೆ | ಹಾಲಿ ಜಾರಿಯಲ್ಲಿರುವ ಉಪವಿಧಿ | ತಿದ್ದುಪಡಿ / ಸೇರ್ಪಡೆಯಾಗಬೇಕಾಗಿರುವುದು | ತಿದ್ದುಪಡಿ / ಸೇರ್ಪಡೆಯಾದ ಮೇಲೆ ಇರುವುದು | ತಿದ್ದುಪಡಿ ಸೇರ್ಪಡೆಗೆ ಕಾರಣ |
|---|---|---|---|---|
| 64 (4) | **64(4) ನಿವೃತ್ತಿ ವಯಸ್ಸು :** ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನು ಅರವತ್ತು ವರ್ಷಗಳ ಅಥವಾ ಸರ್ಕಾರಿ ನೌಕರನಿಗೆ ಅನ್ವಯಿಸುವ ವಯಸ್ಸಿಗೆ ಅನುಗುಣವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಆದರೆ ತಿಂಗಳ ಕೊನೆಯ ದಿನಕ್ಕೆ ಮೊದಲು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುತ್ತಾನೆ. ಆದಾಗ್ಯೂ ಯಾವುದೇ ನೌಕರನು ಐವತ್ತು ವರ್ಷಗಳನ್ನು ಪೂರೈಸಿದ ಅಥವಾ ಇಪ್ಪತ್ತು ವರ್ಷ ಸೇವೆ ಸಲ್ಲಿಸಿದ್ದಲ್ಲಿ ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ ಆತನ ಮನವಿಯನ್ನು ಪರಿಗಣಿಸಿ ಮಂಡಳಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು. | **64(4) ನಿವೃತ್ತಿ ವಯಸ್ಸು :** ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನ ಅರವತ್ತು ವರ್ಷಗಳ ಅಥವಾ ಸರ್ಕಾರಿ ನೌಕರನಿಗೆ ಅನ್ವಯಿಸುವ ವಯಸ್ಸಿಗೆ ಅನುಗುಣವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಆದರೆ ತಿಂಗಳ ಕೊನೆಯ ದಿನಕ್ಕೆ ಮೊದಲು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುತ್ತಾನೆ. ಆದಾಗ್ಯೂ ಯಾವುದೇ ನೌಕರನು ನಲವತ್ತೈದು ವರ್ಷಗಳ ವಯಸ್ಸನ್ನು ಪೂರೈಸಿದ ಅಥವಾ ಹದಿನೈದು ವರ್ಷ ಸೇವೆ ಸಲ್ಲಿಸಿದ್ದಲ್ಲಿ ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ ಆತನ ಮನವಿಯನ್ನು ಪರಿಗಣಿಸಿ ಮಂಡಳಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು. | **64(4) ನಿವೃತ್ತಿ ವಯಸ್ಸು :** ಯಾವುದೇ ಬ್ಯಾಂಕಿನ ನೌಕರ ಅಥವಾ ಅಧಿಕಾರಿಯ ವಯೋನಿವೃತ್ತಿ ದಿನಾಂಕವು ಆತನ ಅರವತ್ತು ವರ್ಷಗಳ ಅಥವಾ ಸರ್ಕಾರಿ ನೌಕರನಿಗೆ ಅನ್ವಯಿಸುವ ವಯಸ್ಸಿಗೆ ಅನುಗುಣವಾಗಿರತಕ್ಕದ್ದು. ಯಾವುದೇ ತಿಂಗಳ ಪ್ರಥಮ ದಿನದ ನಂತರದ ಯಾವುದೇ ದಿನದಂದು ಆದರೆ ತಿಂಗಳ ಕೊನೆಯ ದಿನಕ್ಕೆ ಮೊದಲು ಒಬ್ಬ ನೌಕರನು ವಯೋನಿವೃತ್ತಿಯ ವಯಸ್ಸನ್ನು ಪೂರೈಸಿದ್ದಲ್ಲಿ ಆತನು ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದುತ್ತಾನೆ. ಆದಾಗ್ಯೂ ಯಾವುದೇ ನೌಕರನು ನಲವತ್ತೈದು ವರ್ಷಗಳ ವಯಸ್ಸನ್ನು ಪೂರೈಸಿದ ಅಥವಾ ಹದಿನೈದು ವರ್ಷ ಸೇವೆ ಸಲ್ಲಿಸಿದ್ದಲ್ಲಿ ಸ್ವಇಚ್ಛೆಯಿಂದ ನಿವೃತ್ತಿ ಹೊಂದಲು ಲಿಖಿತದಲ್ಲಿ ಮನವಿ ಸಲ್ಲಿಸಿದಲ್ಲಿ ಆತನ ಮನವಿಯನ್ನು ಪರಿಗಣಿಸಿ ಮಂಡಳಿಯು ಆತನಿಗೆ ಸ್ವಇಚ್ಛೆ ನಿವೃತ್ತಿ ಹೊಂದಲು ಅನುಮತಿ ನೀಡಬಹುದು. | ಬ್ಯಾಂಕಿನ ಸೇವೆಯಲ್ಲಿ ಮುಂದುವರೆಯಲು ಇಚ್ಛೆ ಪಡದ ನೌಕರ / ನೌಕರಳ ಕೋರಿಕೆಯ ಮನ್ನಣೆಗಾಗಿ. |
| 64(4)(1) | **ಕಡ್ಡಾಯ ನಿವೃತ್ತಿ :** ಹಾಲಿ ಇರುವುದಿಲ್ಲ 64(4)(1) | **64(4)(1) ಕಡ್ಡಾಯ ನಿವೃತ್ತಿ :** ನೌಕರನ ಒಟ್ಟು ದಕ್ಷತೆಯ ಮಟ್ಟದ ಆಧಾರದಲ್ಲಿ ಆತನನ್ನು ಮುಂದುವರೆಸುವುದು ಬ್ಯಾಂಕಿನ ಹಿತದೃಷ್ಟಿಯುಲ್ಲಿ ಸೂಕ್ತವಲ್ಲವೆಂದು ಮನದಟ್ಟಾದಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರುವ ನೌಕರ / ನೌಕರಳನ್ನು ಕಡ್ಡಾಯ ನಿವೃತ್ತಿ ಗೊಳಿಸಬಹುದಾಗಿದೆ. | **64(4)(1) ಕಡ್ಡಾಯ ನಿವೃತ್ತಿ :** ನೌಕರನ ಒಟ್ಟು ದಕ್ಷತೆಯ ಮಟ್ಟದ ಆಧಾರದಲ್ಲಿ ಆತನನ್ನು ಮುಂದುವರೆಸುವುದು ಬ್ಯಾಂಕಿನ ಹಿತದೃಷ್ಟಿಯುಲ್ಲಿ ಸೂಕ್ತವಲ್ಲವೆಂದು ಮನದಟ್ಟಾದಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರುವ ನೌಕರ / ನೌಕರಳನ್ನು ಕಡ್ಡಾಯ ನಿವೃತ್ತಿ ಗೊಳಿಸಬಹುದಾಗಿದೆ. | ಬ್ಯಾಂಕಿಂಗ್ ಸ್ಪರ್ಧಾತ್ಮಕ ಯುಗದಲ್ಲಿ ಅದಕ್ಷ ನೌಕರರನ್ನು ಮುಂದುವರೆಸುವುದು ಬ್ಯಾಂಕಿನ ಶ್ರೇಯೋಭಿವೃದ್ಧಿ ಹಾಗೂ ಆರ್ಥಿಕ ಹಿತದೃಷ್ಟಿಯಿಂದ ಒಳಿತಲ್ಲ. ಅದಕ್ಷ ನೌಕರರಿಂದಾಗಿ ದಕ್ಷ ನೌಕರರ ದಕ್ಷತೆ ಮೇಲೆ ಸಹಾ ದುಷ್ಪರಿಣಾಮ ಬೀರುತ್ತದೆ. |

## ಬ್ಯಾಂಕಿನ ಪ್ರಗತಿ ಪಕ್ಷಿನೋಟ

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ವಿವರಗಳು | 2018 | 2019 | 2020 | 2021 | 2022 |
|---|---|---|---|---|---|---|
| 1 | ಶಾಖೆಗಳು | 10 | 10 | 10 | 10 | 10 |
| 2 | ಸದಸ್ಯರ ಸಂಖ್ಯೆ | 14324 | 14781 | 15328 | 15248 | 15248 |
| 3 | ಪಾವತಿಯಾದ ಷೇರು ಮೊಬಲಗು | 1784.62 | 1908.07 | 2015.11 | 2131.84 | 2223.14 |
| 4 | ಆಪದ್ಧನ ಮತ್ತು ಇತರೆ ನಿಧಿಗಳು | 2454.47 | 2547.60 | 3004.15 | 3646.90 | 4064.09 |
| 5 | ಠೇವಣಿಗಳು | 26008.22 | 31746.04 | 30793.31 | 29567.36 | 32619.17 |
| 6 | ಸಾಲ ಮತ್ತು ಮುಂಗಡ | 16767.42 | 18418.62 | 18479.00 | 20047.28 | 19116.78 |
| 7 | ವಸೂಲಿ ಪ್ರಮಾಣ | 98.65% | 98.01% | 97.44% | 88.83% | 97.07% |
| 8 | ಅನುತ್ಪಾದಕ ಆಸ್ತಿಗಳ ಸ್ಥೂಲ ಪ್ರಮಾಣ (Gross NPA) | 3.35% | 1.99 % | 2.56% | 11.17% | 2.93% |
| | ಅನುತ್ಪಾದಕ ಆಸ್ತಿಗಳ ನಿವ್ವಳ ಪ್ರಮಾಣ (Net NPA) | 1.59% | 0.69 % | 0.92% | 8.94% | 0 |
| 9 | ಬಂಡವಾಳ ಪರ್ಯಾಪ್ತತಾ ಅನುಪಾತ (CRAR) | 21.70% | 21.46% | 23.46% | 21.65% | 28.03% |
| 10 | ಆದ್ಯತಾ ವಲಯಕ್ಕೆ ನೀಡಿದ ಸಾಲಗಳ ಪ್ರಮಾಣ | 51.46% | 50.52% | 54.19% | 48.15% | 44.61% |
| 11 | ನಿವ್ವಳ ಲಾಭ (ಲಕ್ಷಗಳಲ್ಲಿ) | 365.63 | 373.01 | 381.55 | 205.00 | 393.82 |
| 12 | ಘೋಷಿಸಿದ ಷೇರು ನಫೆ | 13% | 13% | ಆರ್.ಬಿ.ಐ. ರದ್ದುಪಡಿಸಿದೆ | 6% | ಶೇ. 10% ಶಿಫಾರಸ್ಸು ಮಾಡಿದೆ |

ಅಂಚೆ ನೋಂದಣಿ ಪಡೆದಿದೆ

ತೆರೆದ-ಅಂಚೆ

**ಮುದ್ರಿತ ವಿಷಯ**

ಶ್ರೀಮತಿ/ಶ್ರೀ.........................................................................

...............................................................................................

...............................................................................................

...............................................................................................

ಅಂಚೆ ತಲುಪದಿದ್ದಲ್ಲಿ ಹಿಂತಿರುಗಿಸಿ :

**ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ನಂ. 195/33, "ಶ್ರೀ ಸುಧಾ ರಜತ ಭವನ", ಆರ್.ವಿ. ರಸ್ತೆ

ಜಯನಗರ, ಬೆಂಗಳೂರು-560 004.